# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ ಕಟ್ಟಡ ಜಯಂತಿ ನಗರ ವೃತ್ತ ಹೊರಮಾವು/ಕಲ್ಕೆರೆ ಮುಖ್ಯರಸ್ತೆ,
ಹೊರಮಾವು ಗ್ರಾಮ, ಬೆಂಗಳೂರು- 560113

ಸಂಖ್ಯೆ.ಬಿಬಿಎಂಪಿ/ಸ.ಕಾ.ಅ/ಹೊಉವಿ/ಪಿಆರ್/ 07/2020-21 ದಿನಾಂಕ: 02.01.2021

*ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿಆರ್/35/ 2020-21 ದಿನಾಂಕ:21/09/2020 ಹಾಗೂ ನೋಡಲ್ ಅಧಿಕಾರಿ/ಉಪ ಆಯುಕ್ತರು (ಮಹದೇವಪುರ) ರವರು ದಿನಾಂಕ:-02.01.2021 ರಂದು ಹೊರಮಾವು ಉಪವಿಭಾಗದ ವಾರ್ಡ್-25 ರ ಕಛೇರಿಯಲ್ಲಿ ಸಭೆಯನ್ನು ಏರ್ಪಡಿಸಲಾಗಿದ್ದು, ಸಭೆಯ ನಡವಳಿಗಳು ಈ ಕೆಳಕಂಡಂತಿರುತ್ತದೆ.*

ಉಪಸ್ಥಿತರು:

| ಕ್ರ.ಸಂ | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| | | ಅಧಿಕಾರಿಗಳು | |
| 1 | ಶ್ರೀಮತಿ.ಸರೋಜಾದೇವಿ | ನೋಡಲ್ ಅಧಿಕಾರಿ ವಾ.ನಂ.25 ಹಾಗೂ ಉಪ ಆಯುಕ್ತರು (ಮಹದೇವಪುರ) | 9480684059 |
| 2 | ಶ್ರೀಮತಿ.ಜ್ಯೋತಿಲಕ್ಷ್ಮಿ | ಸ.ಕಂ.ಅ ಹೊರಮಾವು | 9108201798 |
| 4 | ಶ್ರೀ.ರಮೇಶ್ | ಜೆ.ಇ ಹೊರಮಾವು ವಾರ್ಡ್-25 | 9739838297 |
| 5 | ಶ್ರೀ. ಸಂಜಯ್ ಕುಮಾರ್ | ಹಿರಿಯ ಆರೋಗ್ಯ ಪರಿವೀಕ್ಷಕರು | 9742919411 |
| 6 | ಶ್ರೀ.ಹರೀಶ್ | ಕಿರಿಯ ಆರೋಗ್ಯ ಪರಿವೀಕ್ಷಕರು | 8431325214 |
| 7 | ಶ್ರೀ.ಆನಂದ್ | BWSSB (AEE) | 7975488206 |
| 8 | ಶ್ರೀ.ತಿರುಮಲ ಪ್ರಸಾದ್ | BWSSB (PMC) | 9591646857 |
| 9 | ಶ್ರೀ.ಮಂಜುನಾಥ | H C 8896-Kothnuru Police Station | |
| | | | |
| 10 | ಶ್ರೀ.ಆರ್ಮುಗಂ, ಸರ್.ಎಂ.ವಿ ನಗರ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್ | - | - |
| 11 | ಶ್ರೀ.ದಾಮೋದರನ್ ಸರ್.ಎಂ.ವಿ ನಗರ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್ | - | - |
| 12 | ಶ್ರೀ.ಟೋನಿಸ್ವಾಮಿ ಸಾಯಿ ಬಡಾವಣೆ | - | - |
| 13 | ಶ್ರೀ.ಕೃಷ್ಣಪ್ಪ, ಬಂಜಾರ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್ ಹೊರಮಾವು ಅಗರ | - | - |

ಮಾನ್ಯ ನೋಡಲ್ ಅಧಿಕಾರಿ/ಉಪ ಆಯುಕ್ತರು (ಮಹದೇವಪುರ) ರವರ ಸಮ್ಮುಖದಲ್ಲಿ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ/ಸಿಬ್ಬಂದಿ ಇತರೆ ಸಂಘ ಸಂಸ್ಥೆಗಳು ಸಾರ್ವಜನಿಕರಿಗೆ ಸುಸ್ವಾಗತ ಕೋರುತ್ತಾ, ಬಿಬಿಎಂಪಿ ವಾರ್ಡ್ ನಂ.25 ರ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾರ್ಯ, ಮೂಲಭೂತ ಸೌಕರ್ಯಗಳಾದ ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ಸಾರ್ವಜನಿಕ ಆರೋಗ್ಯ, ನಗರದ ಸ್ವಚ್ಛತೆ, ರಸ್ತೆ ನಿರ್ವಹಣೆ, ಬೃಹತ್ ನೀರುಗಾಲುವೆಗಳ ನಿರ್ವಹಣೆ, ಬೀದಿ ದೀಪಗಳ ನಿರ್ವಹಣೆ, ಕಲ್ಯಾಣ ಕಾರ್ಯಕ್ರಮಗಳು, 110 ಹಳ್ಳಿಗಳ ವ್ಯಾಪ್ತಿಯಲ್ಲಿ ಬಿಡಬ್ಲೂಎಸ್‌ಎಸ್‌ಬಿ ರವರು ಕೊಳವೆ ಸಾಲುಗಳ ಅಳವಡಿಸುತ್ತಿರುವ ಸಂಬಂಧ ಹಾಗೂ ಸಾರ್ವಜನಿಕರ ಸಮಸ್ಯೆ ಕುಂದುಕೊರತೆಗಳನ್ನು ಬಗೆಹರಿಸುವಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿ ಹಾಗೂ ಸಾರ್ವಜನಿಕರಿಗೆ ಸುಸ್ವಾಗತ ಕೋರಿ ಸಭೆಯನ್ನು ಆರಂಭಿಸಿದರು.

Scanned with CamScanner

**ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚೆ:-**

**ಶ್ರೀ.ಆರ್ಮುಗಂ, ದಾಮೋದರನ್ ಮತ್ತು ಶ್ರೀ.ನಂಜಪ್ಪ ಸರ್.ಎಂ.ವಿ ನಗರ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್:-** ರವರು ಮಾತನಾಡಿ ಸರ್.ಎಂ.ವಿ ನಗರ 8ನೇ ಮುಖ್ಯರಸ್ತೆ ಮತ್ತು ಅಡ್ಡರಸ್ತೆಗಳು ಡಾಂಬರೀಕರಣ ಆಗದಿರುವ ಬಗ್ಗೆ ಹಾಗೂ ಗುತ್ತಿಗೆದಾರರಾದ ಶ್ರೀ.ವಸಂತ್‌ಕುಮಾರ್ ರವರಿಗೆ ನೋಟೀಸ್ ಜಾರಿಮಾಡಿ ಡಾಂಬರೀಕರಣ ಮಾಡಲು ಅಧಿಕಾರಿಗಳು ಕ್ರಮಕೈಗೊಳ್ಳಲು ಮತ್ತೊಮ್ಮೆ ಕೋರಿರುತ್ತಾರೆ. ಹಾಗೂ ಶ್ರೀ.ಆರ್ಮುಗಂ ರವರು ಮಾತನಾಡಿ ಸರ್.ಎಂ.ವಿ ನಗರದ ಕೆಲವು ರಸ್ತೆಗಳಲ್ಲಿ ಕೆಲವು ಪುಂಡು ವ್ಯಕ್ತಿಗಳು ಗುಂಪುಗಳನ್ನು ಸೇರುತ್ತಿದ್ದು, ಈ ಕುರಿತು ಕೆ.ಆರ್.ಪುರಂ ಪೋಲೀಸ್ ಠಾಣಾ ವ್ಯಾಪ್ತಿಯಿಂದ ಕ್ರಮ ಕೈಗೊಳ್ಳಲು ಮತ್ತು 19ನೇ ಅಡ್ಡರಸ್ತೆಯಲ್ಲಿ ಕಸ ವಿಲೇವಾರಿಯನ್ನು ಮಾಡಲು ಕೋರಿರುತ್ತಾರೆ.

**ಕ್ರಮ:-** ಆರಕ್ಷಕ ನಿರೀಕ್ಷಕರು, ಕೆ.ಆರ್.ಪುರಂ-ರಾಮಮೂರ್ತಿನಗರ ಪೋಲಿಸ್‌ಠಾಣೆ ರವರು ಸೂಕ್ತ ಕ್ರಮವಹಿಸಲು, ಹಿರಿಯ/ಕಿರಿಯ ಪರಿವೀಕ್ಷಕರು ಹೊರಮಾವು ವಾರ್ಡ್ ಸಂಖ್ಯೆ-25 ರವರು ಕ್ರಮವಹಿಸಲು ಸಭೆಯು ಸೂಚಿಸಲಾಯಿತು.

**ಶ್ರೀ.ಟೋನಿಸ್ವಾಮಿ ಸಾಯಿ ಬಡಾವಣೆ:-** ರವರು ಮಾತನಾಡಿ ಸಾಯಿಬಾಬ ಬಡಾವಣೆ, ಗೆದ್ದಲಹಳ್ಳಿ ರೈಲ್ವೇ ಸೇತುವೆಯ ಅಗಲೀಕರಣ ಮಾಡಲು ರೂ.18.00 ಕೋಟಿಗಳನ್ನು ರೈಲ್ವೇ ಇಲಾಖೆಗೆ ಡೆಪಾಸಿಟ್ ಮಾಡಲು ಮತ್ತು ರಾಜಕಾಲುವೆ ತಡೆಗೋಡೆ ನಿರ್ಮಿಸಲು ಕ್ರಮ ವಹಿಸಿರುವ ಬಗ್ಗೆ ಹಾಗೂ ಸುಮಾರು 15 ದಿನಗಳಿಂದ ಸಮರ್ಪಕವಾಗಿ ಕಸ ವಿಲೇವಾರಿ ಆಗದಿರುವ ಬಗ್ಗೆ ಕೋರಿಕೊಂಡಿರುತ್ತಾರೆ.

**ಕ್ರಮ:-** ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ ವಿಭಾಗ ಮತ್ತು ಸಹಾಯಕ ಅಭಿಯಂತರರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರವರು ಈ ಬಗ್ಗೆ ಮುಂದಿನ ಸಭೆಗೆ ಮಾಹಿತಿ ಒದಗಿಸಲು ಹಾಗೂ ಹಿರಿಯ/ಕಿರಿಯ ಪರಿವೀಕ್ಷಕರು ಹೊರಮಾವು ವಾರ್ಡ್ ಸಂಖ್ಯೆ-25 ರವರು ಕ್ರಮವಹಿಸಲು ಸಭೆಯು ಸೂಚಿಸಲಾಯಿತು.

***ಶ್ರೀ.ಕೃಷ್ಣಪ್ಪ, ಬಂಜಾರ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್ ಹೊರಮಾವು ಅಗರ:-*** ರವರು ಮಾತನಾಡಿ ಬಂಜಾರ ಬಡಾವನೆಯಲ್ಲಿ ಅಲ್ಲಲ್ಲಿ ನೀರು ಸರಬರಾಜು ಕೊಳವೆಸಾಲುಗಳು ಸುಮಾರು 2.00ಕಿ.ಮೀ ಉದ್ದಕ್ಕೆ ಹಾಳಾಗಿದ್ದು, ಇವುಗಳನ್ನು ಬದಲಾಯಿಸಿ ಅಗತ್ಯ ಕ್ರಮವಹಿಸಲು ಕೋರಿಕೊಂಡಿರುತ್ತಾರೆ.

**ಕ್ರಮ:-** ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೊರಮಾವು ಉಪ-ವಿಭಾಗ ರವರು ಕೂಡಲೇ ಕ್ರಮವಹಿಸಲು ಸಭೆಯು ಸೂಚಿಸಿತು.

ಸಭೆಯನ್ನು ಮುಕ್ತಾಯಗೊಳಿಸುವ ಸಲುವಾಗಿ ಕೊನೆಯದಾಗಿ ಸ.ಕಾ.ಅ ಹೊರಮಾವು ಉಪ-ವಿಭಾಗ ರವರು ಸಭೆಯಲ್ಲಿ ನುರಿತ ಸಲಹೆ ಸೂಚನೆಗಳನ್ನು ಚರ್ಚಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸುತ್ತಾ, ವಾರ್ಡ್‌ನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಬಗ್ಗೆ ವಾರ್ಡ್ ಮಟ್ಟದಲ್ಲಿ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಕ್ರಮವಹಿಸುವುದಾಗಿ ತಿಳಿಸುತ್ತಾ, ವಂದನೆಗಳೊಂದಿಗೆ ನೋಡಲ್ ಅಧಿಕಾರಿಗಳ ಅಪ್ಪಣೆ ಮೇರೆಗೆ ಸಭೆಯನ್ನು ಮುಕ್ತಾಯಗೊಳಿಸಿದರು.

M. S... 2.1.2021

ನೋಡಲ್ ಅಧಿಕಾರಿ ವಾರ್ಡ್ ನಂ.25
ಹಾಗೂ ಉಪ ಆಯುಕ್ತರು
(ಮಹದೇವಪುರ) ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಿರಿಯ ಅಭಿಯಂತರರು
ಹೊರಮಾವು ವಾರ್ಡ್‌ನಂ.25
ಬಿ.ಬಿ.ಎಂ.ಪಿ

Scanned with CamScanner